ವಹಿಸಿಕೊಳ್ಳುತ್ತಾರೆಂದು ಇತ್ತೀಚೆಗೆ ಸರ್ಕಾರ ಆಜ್ಞೆ ಹೊರಡಿಸಿದೆ. ಆದರೆ ಅವರು ವಹಿಸಿಕೊಂಡಿಲ್ಲ ಇದರಿಂದ ಅಲ್ಲಲ್ಲಿ ಒಳಚರಂಡಿ ಪೈಪುಗಳು ಒಳಗೊಳಗೇ ಬರ್‌ಸ್ಟ್ ಆಗಿ ಹೊಲಸೆಲ್ಲ ಮೇಲೆ ಬಂದು ಜನರಿಗೆ ಬಹಳ ತೊಂದರೆಯಾಗಿದೆ. ಅದರ ಬಗ್ಗೆ ಸರ್ಕಾರ ಆದಷ್ಟು ಗಮನಹರಿಸಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಅದನ್ನು ಪರೀಕ್ಷೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ವಿಷಯ:- ಜೆಮ್ಸ್ ಕಟಿಂಗ್ ಯೂನಿಟ್‌ಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 145 (1156)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ತಾಲೂಕಿನಲ್ಲಿ ಎಷ್ಟು ಜೆಮ್ಸ್ ಕಟಿಂಗ್ಸ್ ಯೂನಿಟ್‌ಗಳಿವೆ, ಈ ಯೂನಿಟ್‌ಗಳಿಗೆ ಕೆ.ಎಸ್.ಐ.ಸಿ.ಯಿಂದ ಸಾಲ ಕೊಡಲಾಗಿದೆಯೇ?

ಆ) ಈ ಯೂನಿಟ್‌ಗಳಲ್ಲಿ ''ರಾ-ಮೆಟಿರಿಯಲ್ಸ್'' ಇಲ್ಲದೆ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎ.ಮೊಹಿದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) 3 ಜೆಮ್ಸ್ ಕಟಿಂಗ್ಸ್ ಘಟಕಗಳಿವೆ. ಈ ಎಲ್ಲಾ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಲ ನೀಡಿರುತ್ತದೆ.

ಆ) ಹೌದು. ಇದರ ಬಗ್ಗೆ ದಿನಾಂಕ 10-6-96ರಂದು ನಡೆದ 6ನೇ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು ಈ ಘಟಕಗಳಿಗೆ ಅವಶ್ಯವಿರುವಷ್ಟು ಕಚ್ಚಾಮಾಲನ್ನು ಸರಬರಾಜು ಮಾಡುವುದಾಗಿ ಡಿ.ಜಿ.ಡಿ.ಸಿ ಅಧ್ಯಕ್ಷರು ಸಮಿತಿಯ ಸಭೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಪ್ರಸ್ತುತ ಎಲ್ಲಾ ಘಟಕಗಳು ಕೆಲಸ ನಿರ್ವಹಿಸುತ್ತಿರುತ್ತವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅಧ್ಯಕ್ಷರೇ, ಈಗಾಗಲೇ ಜಮ್ ಕಟಿಂಗ್ ಯೂನಿಟ್‌ಗಳ ಪಾಂಡವಪುರದಲ್ಲಿ, ಕ್ಯಾತನಹಳ್ಳಿ ಹಾಗೂ ಚಿಕ್ಕಾಣಿಗಳಲ್ಲಿ ಮೂರು ಘಟಕಗಳಿವೆ. ರಾಜ್ಯದ ತುಂಬೆಲ್ಲ ಇದೆ. ಆದರೆ ಸ್ಥಿತಿ ಏನಾಗಿದೆ ಎಂದರೆ ಒಂದು ತಿಂಗಳಲ್ಲಿ 15 ದಿವಸ ಮಾತ್ರ ಕೆಲಸ ಸಿಗುತ್ತದೆ, ಇನ್ನು ಹದಿನೈದು ದಿವಸ ಕೆಲಸ ಇಲ್ಲ. ಕೆಎಸ್‌ಎಫ್‌ಸಿಯವರು ಪಾಲಿಶಿಂಗ್ ಮೆಶಿನ್‌ಗೆ ಸಾಲ ಕೊಟ್ಟಿದ್ದಾರೆ. ಆ ಸಾಲದ ಮೆಲೆ ಬಡ್ಡಿ ಬೆಳೆಯುತ್ತಿದೆ. ಇವರ ದಿನನಿತ್ಯದ ದುಡಿಮೆ ಹಣ ಜೀವನಕ್ಕೆ ಆಗದಿರುವಂತಹ ಪರಿಸ್ಥಿತಿ ಸುಮಾರು 12 ವಿಚಾರಗಳಿವೆ ಅದನ್ನು ನಿಮಗೆ ಕಳಿಸಿಕೊಡುತ್ತೇನೆ, ನನ್ನದೊಂದು ಸಲಹೆ ಏನಂದರೆ ಇದು ಬಹಳ ಗಂಭೀರವಾದ ವಿಷಯ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಉದ್ಯೋಗ

ಸೃಷ್ಟಿಮಾಡಿರುವುದು. ಲಲಿತಾನಾಯಕ್‌ರವರು ಮಹಿಳಾ ಆಯೋಗ ಸೃಷ್ಟಿಮಾಡಿದಾಗ ಅಲ್ಲಿ ಇದರ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು. ಹೆಣ್ಣುಮಕ್ಕಳ ಸಮಸ್ಯೆ ಜಾಸ್ತಿ ಇದ್ದು ಎಂಎಲ್‌ಎ ಆಗುವ ಮುಂಚೆ ಒಂದು ಚಳುವಳಿ ಮಾಡಿ ಅಧಿಕಾರಿಗಳನ್ನು ಕರೆದು ಮಾತನಾಡಿ ಅಲ್ಪಸ್ವಲ್ಪ ಸರಿಮಾಡಿ ಡಿಲ್ಲಿಯಿಂದ ಬಂದಿದ್ದರು ಯಾರೋ ಒಬ್ಬರು ಮಿಲಿಟರಿ ಆಫೀಸರು. ಅವರು ಏನು ಮಾತನಾಡಿ ಹೋಗುತ್ತಾರೆ ಆ ರೀತಿ ಕೆಲಸ ಆಗುತ್ತಿಲ್ಲ. ಉದಾಹರಣೆಗೆ ಒಂದು ಹೇಳುತ್ತೇನೆ ಕೇಳಿ. ಒಂದು ತಿಂಗಳಲ್ಲಿ 15 ದಿವಸಗಳ ಕೆಲಸ, ಸಾಕಷ್ಟು ಪ್ರಮಾಣದಲ್ಲಿ ಕಚ್ಚಾವಸ್ತುಗಳು ಪೂರೈಕೆಯಾಗುತ್ತಿಲ್ಲ, ಪಾಲಿಶ್ ಮಾಡಿದ ಸುಮಾರು 500 ತುಂಡುಗಳಲ್ಲಿ 300 ತುಂಡುಗಳು ರಿಜೆಕ್ಟ್ ಮಾಡುತ್ತಾರೆ. ಇದಕ್ಕೆ ಕಾರಣವೇನು ಎಂದು ಗೊತ್ತಿಲ್ಲ. ಏಕೆಂದರೆ ಕ್ವಾಲಿಟಿ ಇನ್‌ಸ್ಪೆಕ್ಟರು ಇತರೆ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿಲ್ಲ. ಜೊತೆಗೆ ಹ್ಯಾಂಡಿಕ್ರಾಫ್ಟ್ಸ್ ಅಂದರೆ ಲಾಭ ಮಾಡುವ ಸಂಸ್ಥೆಗಳು, ಇಂತಹ ಸಂಸ್ಥೆಗಳ ನಡೆಸುವ ಮೂಲಕ ಇವುಗಳ ಕುಂದುಕೊರತೆಗಳನ್ನು ನೋಡುವ ಮೂಲಕ ಕೆಲಸ ಮಾಡಬೇಕೆಂದು ತಮ್ಮ ಗಮನಕ್ಕೆ ತರುತ್ತಾ ಈ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕಾಗಿ ಒಂದು ಸಭೆ ಕರೆದರೆ ಬದಲಾವಣೆ ಮಾಡಬಹುದು. ಇಲ್ಲದಿದ್ದರೆ ಕೆಎಸ್‌ಎಫ್‌ಸಿ ಸಾಲದಲ್ಲಿ ಊಟಕ್ಕಿಲ್ಲದಿರುವ ಪರಿಸ್ಥಿತಿ ಸೃಷ್ಟಿಯಾಗಿದೆ. ದಯವಿಟ್ಟು ಆ ಮೀಟಿಂಗ್ ಕರೆಯಿರಿ.

ಶ್ರೀ ಬಿ.ಎ.ಮೊಯಿನುದೀನ್:- ಅಧ್ಯಕ್ಷರೇ ಕರ್ನಾಟಕದಲ್ಲಿ ಜೆಮ್ ಕಟಿಂಗ್ ಅಂಡ್ ಪಾಲಿಶಿಂಗ್ ಯೂನಿಟ್ಸ್ 22 ಇವೆ, ಅವುಗಳ ಮೂಲಕ 500 ಜನರಿಗೆ ಕೆಲಸ ಕೊಡುವ ಯೋಜನೆ ನಮ್ಮದು. ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ 10 ಸೆಂಟಿರ್ಸಿವೆ, ಇವರ ಪಾಂಡಪುರ ಕ್ಷೇತ್ರದಲ್ಲಿ 3 ಇದ್ದು 92 ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈ ಡೈಮಂಡ್ ಜೆಂ ಅಭಿವೃದ್ಧಿ ನಿಗಮವೇನಿದೆ ಇದನ್ನು ಬಾಂಬೆಯ ಒಬ್ಬ ಸಮಾಜಸೇವಕ ಹೆಂಗಸರಿಗೆ ಕೆಲಸ ಕೊಡಲಿಕ್ಕಾಗಿ ಕಂಪೆನಿಗಳ 25ನೇ ಸೆಕ್ಷನ್‌ರೀತ್ಯ ಲಾಭನಷ್ಟವಿಲ್ಲದ ಬೇಸಿನ್‌ನಲ್ಲಿ ಮಾಡಿರುವುದು. ಜಾಗತಿಕ ಬೇಡಿಕೆ ಕಮ್ಮಿಯಾದಾಗ ಅವರಿಗೆ ಪಾಪ ಮಾರುಕಟ್ಟೆಗೆ ತೊಂದರೆಯಾಗಿದೆ. ಏಪ್ರಲ್‌ನಿಂದ ಮೆ ವರೆಗೆ ಎರಡು ತಿಂಗಳು ಕೆಲಸ ಇರಲಿಲ್ಲ. ನಿಜ, ಜೂನ್‌ನಲ್ಲಿ ನಾವು ಅವರನ್ನು ಕರೆಸಿ ನಮ್ಮ ಕಾರ್ಯದರ್ಶಿಮಟ್ಟದಲ್ಲಿ ಸಭೆ ನಡೆಸಿ ಕಚ್ಚಾವಸ್ತು ಪೂರೈಸಿದ್ದಾರೆ ಅವರಿಗೆ. ಅದರ ಜೊತೆಗೆ ಗ್ರಾಮೀಣ ಮಹಿಳೆಯರಿಗೆ ಉದ್ಯೋಗವೊದಗಿಸುವುದು ಒಳ್ಳೆಯ ಕೆಲಸವೆಂದು ನಾನು ಇದನ್ನು ಭಾವಿಸಿದ್ದೇನೆ. ಒಂದು ವೇಳೆ ಇವರ ಹಿತರಕ್ಷಣೆ ಮಾಡಲು ನಿಗಮ ಬರದೇ ಇದ್ದ ಪಕ್ಷದಲ್ಲಿ ಕರ್ನಾಟಕ ಹ್ಯಾಂಡ್‌ಲೂಂ ನಿಗಮವೇನಿದೆ ಇದರ ಜವಾಬ್ದಾರಿಯನ್ನು ಸರ್ಕಾರ ವಹಿಸುತ್ತದೆಂಬ ಭರವಸೆಯನ್ನು ತಮ್ಮ ಮೂಲಕ ಅವರಿಗೆ ಕೊಡಲು ನಾನು ಇಷ್ಟಪಡುತ್ತೇನೆ. ಜೊತೆಗೆ ನನ್ನ ಡಿಐಸಿ ಜನರಲ್ ಮ್ಯಾನೇಜರ್‌ಗೆ ಈಗಲೇ ಆದೇಶ ಕೊಡುತ್ತೇನೆ ಆಗಿಂದಾಗ್ಗೆ ಅಲ್ಲಿಗೆ ಭೇಟಿ ಕೊಟ್ಟು ಅವರ ನೈಪುಣ್ಯತೆ ಏಕೆಂದರೆ ರಿಜೆಕ್ಟಾಗಬಾರದು ಹೆಚ್ಚು ಮಾಡಿಸುವಂತಹ ಕೆಲಸ ನಾನು ಮಾಡುತ್ತೇನೆ ಮತ್ತು ಸದಸ್ಯರೂ ಸಹ ಆಗಿಂದಾಗ್ಗೆ ತಮ್ಮ ಸಹಕಾರ ಕೊಟ್ಟು

ಇದು ಬೆಳೆಯುವಂತೆ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ತಾವು ಹೇಳಿದ ಮಾತು ಒಪ್ಪಿಕೊಳ್ಳುತ್ತೇನೆ, ಮೊದಲಿದ್ದ ದರಕ್ಕಿಂತ ಈಗ ಕಡಿಮೆ ಮಾಡಿದ್ದಾರೆ.

ಶ್ರೀ ಬಿ.ಎ.ಮೊಯಿಸುದೀನ್:- ಕೂಡಲೇ ನಾನು ಸಭೆ ಕರೆಸುತ್ತೇನೆ. ತಮ್ಮನ್ನೂ ಕರೆಸುತ್ತೇನೆ.

ವಿಷಯ:- ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 146 (664)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ರೇಷ್ಮೆ ಕೃಷಿರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ : 24.1.94 ರಂದು 160 ರೇಷ್ಮೆ ನಿರೀಕ್ಷಕರು, 216 ರೇಷ್ಮೆ ಪ್ರದರ್ಶಕರ ಹುದ್ದೆಗಳಿಗೆ ಅರ್ಜಿ ಕರೆದಿದ್ದಾಗ್ಯೂ ಇನ್ನುವರೆಗೆ ಖಾಲಿ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು

ಆ) ಇವುಗಳನ್ನು ಯಾವಾಗ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅರ್ಜಿ ಹಾಕಿದ ನಂತರ ವಯೋಮಿತಿಯಿಂದ ತೊಂದರೆ ಆದವರಿಗೆ ಪರಿಹಾರವೇನು?

ಶ್ರೀ ಎಂ.ವರದೇಗೌಡ (ರೇಷ್ಮೆ ಕೃಷಿ ರಾಜ್ಯ ಮಂತ್ರಿಗಳು):-

ಅ) ಕಾರಣಗಳು.

1) ರಾಜ್ಯದ ಮೀಸಲಾತಿ ನೀತಿಯಲ್ಲಿ ಬದಲಾವಣೆ ಆದದ್ದು : ಮತ್ತು ಅದರ ಮೇಲೆ ಸರ್ವೋಚ್ಚ ನ್ಯಾಯಾಲಯದ ಆದೇಶದಿಂದ

2) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಹೂಡಿದ್ದರಿಂದ

ಆ) ಆಯ್ಕೆಗೊಂಡ ಅಭ್ಯರ್ಥಿಗಳ ಜಾತಿ : ವರಮಾನಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕರಣ ಪತ್ರಗಳು ಬಂದ ನಂತರ

ಇ) ಅಭ್ಯರ್ಥಿಗಳ ವಯೋಮಿತಿಯನ್ನು ಅರ್ಜಿ ಕರೆದಾಗ ನಿಗದಿಪಡಿಸಿದ್ದ ದಿನಾಂಕದಂದು ಇದ್ದಂತೆ ಪರಿಗಣಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಯು.ಬಿ.ಬಣಕಾರ್:- ಅಧ್ಯಕ್ಷರೇ ವಿದ್ಯಾವಂತ ನಿರುದ್ಯೋಗಿ ಯುವಕರು ಸಮಾಜಕ್ಕೆ ತಂದೆತಾಯಿಗಳಿಗೆ ಭಾರವಾಗಿರುವ ಈ ಸಂದರ್ಭದಲ್ಲಿ ರೇಷ್ಮೆ ಇಲಾಖೆಯಲ್ಲಿ 24-1-94ರಲ್ಲಿ ಕರೆದಂಥ 160 ರೇಷ್ಮೆ ನಿರೀಕ್ಷಕರು ಹಾಗೂ 216 ರೇಷ್ಮೆ ಪ್ರದರ್ಶಕರ